# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001
ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/Women's Day/೨೪೨/2025-26 ದಿನಾಂಕ:09.03.2026

ಶ್ರೀಮತಿ.________________
ಜಿಲ್ಲಾ ಗೈಡ್ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
_____________________ ಜಿಲ್ಲೆ

ಮಾನ್ಯರೆ,

ವಿಷಯ: ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಗೈಡ್ ಆಯುಕ್ತರುಗಳ ಸಮಾವೇಶದಲ್ಲಿ ತಾವು ಭಾಗವಹಿಸುವ ಬಗ್ಗೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಸಂಸ್ಥೆ ಮತ್ತು ಹಾವೇರಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ: 28.03.2026ರಂದು ಜಿಲ್ಲಾ ಗುರುಭವನ, ಹಾವೇರಿ ಇಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಗೈಡ್ ಆಯುಕ್ತರುಗಳ ಸಮಾವೇಶವನ್ನು ಆಯೋಜಿಸಲಾಗಿದೆ.

ಆದ್ದರಿಂದ ನೀವು ದಯಮಾಡಿ ದಿನಾಂಕ:28.3.2026ರಂದು ಬೆಳಗ್ಗೆ 9.00 ಗಂಟೆಗೆ ಗುರುಭವನ, ಹಾವೇರಿ ಇಲ್ಲಿ ಏರ್ಪಡಿಸಿರುವ ಜಿಲ್ಲಾ ಗೈಡ್ ಆಯುಕ್ತರ ಸಮಾವೇಶದಲ್ಲಿ ತಪ್ಪದೇ ಭಾಗವಹಿಸಲು ಮತ್ತು ಸ್ಕೌಟ್-ಗೈಡ್ ಅಭಿವೃದ್ಧಿಯಲ್ಲಿ ತಮ್ಮ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ತಿಳಿಸಲು ಕೋರಲಾಗಿದೆ.

ಭಾಗವಹಿಸುವವರಿಗೆ ಊಟೋಪಚಾರದ ವ್ಯವಸ್ಥೆಯನ್ನು ಹಾವೇರಿ ಜಿಲ್ಲಾ ಸಂಸ್ಥೆಯವರು ನಿರ್ವಹಿಸಲಿರುವರು, ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ. ತಾವು ಭಾಗವಹಿಸುವ ಬಗ್ಗೆ ದಿನಾಂಕ:25.03.2026ರ ಒಳಗಾಗಿ ಪತ್ರ ಮುಖೇನಾ ಶ್ರೀಮತಿ ಸಿ. ಮಂಜುಳ, ರಾಜ್ಯ ಸಂಘಟನಾ ಆಯುಕ್ತರು(ಗೈ) ರಾಜ್ಯ ಕೇಂದ್ರ ಕಚೇರಿ, ಬೆಂಗಳೂರು (ಮೊ.ಸಂ. 9482433516) ಮತ್ತು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು(ಗೈ) ಇವರಿಗೆ ವಾಟ್ಸಾಪ್ (ಮೊ. ನಂ. 9480037665) ಮೂಲಕ ಕಳುಹಿಸುವುದು. ದಿನಾಂಕ:28.03.2026ರಂದು ಸಂಜೆ 4.00 ಗಂಟೆಗೆ, ಸದರಿ ಕಾರ್ಯಕ್ರಮವು ಮುಕ್ತಾಯಗೊಳ್ಳುವುದು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ಕರ್ನಾಟಕ
2. ಜಿಲ್ಲಾ ಕಾರ್ಯದರ್ಶಿ, ಭಾ.ಸ್ಕೌ&ಗೈ, ಕರ್ನಾಟಕ
3. ಎಎಸ್‌ಒಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ